ಕೋಟೆ ಕಾನೂರು ಸಮೀಪ ಬಳೆಗಾರು ಎಂಬ ಸಣ್ಣ ಹಳ್ಳಿಯ ವಾಸಿ ಸೂಲಗಿತ್ತಿ ನಾಗಮ್ಮ. ಅವಳು ವೃತ್ತಿಯಲ್ಲಿ ಕೃಷಿ ಕಾರ್ಮಿಕಳು; ಉಪ ಕಸುಬು ಸೂಲಗಿತ್ತಿಯದು. ಸಮೀಪದ ಯಾವುದೇ ಊರಿನಲ್ಲಿ ಹೆರಿಗೆ ಕೆಲಸವಿದ್ದರೆ ನಾಗಮ್ಮ ಅಲ್ಲಿ ಹಾಜರ್ ಆಗಿ ಚೆನ್ನಾಗಿ ಹೆರಿಗೆ ಮಾಡಿಸುತ್ತಾಳೆ. ಅದಕ್ಕಾಗಿ ಹೆರಿಗೆ ಮನೆಯವರು ಇವಳಿಗೆ ಕಾಣಿಕೆಯಾಗಿ ಹಣ ಕೊಡುವುದು ವಾಡಿಕೆ. ಇವಳ ಜೀವಮಾನದ ಹೆಚ್ಚು ಸಮಯ ಹೆರಿಗೆ ಮಾಡಿಸುವುದರಲ್ಲಿ ಕಳೆದಿತ್ತು. ಆ ಕೆಲಸದಲ್ಲಿ ಅವಳು ಉತ್ತಮ ಅನುಭವ ಪಡೆದಿದ್ದಳು. ಬಹಳ ಜಾಗರೂಕತೆ ಹಾಗೂ ಸುರಕ್ಷತೆಯಿಂದ ಹೆರಿಗೆ ಮಾಡಿಸುವುದರಲ್ಲಿ ಹೆಸರು ವಾಸಿಯಾಗಿದ್ದಳು. ಎರಡು ಮಕ್ಕಳು ಹಾಗೂ ತನ್ನ ತಾಯಿಯ ಜೊತೆಯಲ್ಲಿ ಇವಳು ವಾಸವಾಗಿದ್ದಳು.

ಒಂದು ದಿನ ಮಧ್ಯರಾತ್ರಿ ನಾಗಮ್ಮನ ಮನೆಗೆ ಪಕ್ಕದ ಊರಿನಿಂದ ಕೆಲವು ಹೆಂಗಸರು ಬಂದು ನಮ್ಮೂರಿಗೆ ಬರಬೇಕು. ನಮ್ಮ ಕುಟುಂಬದ ಹೆಂಗಸಿಗೆ ಹೆರಿಗೆ ನೋವು ಶುರುವಾಗಿದೆ ಎಂದು ನಾಗಮ್ಮನನ್ನು ಆ ನಡುರಾತ್ರಿ ಕರೆದುಕೊಂಡು ಹೋದರು. ಹೋಗುತ್ತಾ ಇದ್ದಾಗ ನಾಗಮ್ಮಗೆ ಬಹಳ ಅನುಮಾನ ಉಂಟಾಯಿತು. ಎಂದೂ ಕಾಣದ ಈ ಹೊಸ ಹೊಸ ಹೆಂಗಸರು, ವಿಚಿತ್ರವಾದ ಅವರ ನಡೆ ನುಡಿ ಎಲ್ಲವೂ ಒಂದು ರೀತಿಯ ಭಯದ ವಾತಾವರಣವನ್ನು ಉಂಟುಮಾಡಿತ್ತು. ಅವಳು ಭಯಪಡುತ್ತಾ ಪ್ರಯಾಸಪಟ್ಟು ಆ ಊರಿಗೆ ಸೇರಿದಳು. ಅವರ ಮನೆಯಲ್ಲಿ ಮಹಿಳೆ ಹೆರಿಗೆ ನೋವಿನಿಂದ ನರಳುತ್ತ ಇದ್ದಳು. ಹೆರಿಗೆಗೆ ಬೇಕಾಗುವ ವ್ಯವಸ್ಥೆ ಮಾಡಿ ನಾಗಮ್ ಕಾಯುತ್ತಿರುವಾಗ ಹೆಣ್ಣು ಮಗುವಿನ ಜನನವಾಯಿತು. ಮನೆಯ ವಿಚಿತ್ರವಾದ ಮಂದಿಗೆಲ್ಲಾ ಬಹಳ ಸಂತೋಷವಾಯಿತು. ಸರಿ, ನಾಗಮ್ಮ ಹೆರಿಗೆಯ ಎಲ್ಲಾ ಕಾರ್ಯ ಮುಗಿಸಿ ಊರಿಗೆ ಹೊರಡಲು ಸಿದ್ಧವಾಗುತ್ತಿದ್ದ ಹಾಗೆ ಅವಳಿಗೆ ಆಗಾಗ ಆಗುತ್ತಿದ್ದ ಅನುಮಾನ ಸರಿ ಎನಿಸಿತು. ಆ ರೀತಿ ಇತ್ತು ಆ ಮನೆಯ ವಾತಾವರಣ. ನಾಗಮ್ಮನನ್ನು ಕರೆದುಕೊಂಡು ಬಂದ ಹೆಂಗಸರು ಇವಳ ಜೊತೆ ಬಳೆಗಾರಿಗೆ ಹೊರಟರು. ಬರುವಾಗ, ಹೋಗುವಾಗ ಈ ಹೆಂಗಸರು ತಟಕ್ ಪಿಟಿಕ್ ಎನ್ನಲಿಲ್ಲ. ನಾಗಮ್ಮನ ಮನೆ ಹತ್ತಿರ ಬರುತ್ತಿದ್ದಂತೆ ಜೊತೆಗೆ ಬಂದ ಹೆಂಗಸರು ಅಲ್ಲೇ ನಿಂತರು. ಅವರಲ್ಲಿ ಒಬ್ಬಳು ಅಲ್ಲೆ ಇದ್ದ ಅವರೆ ಗಿಡದ ಸೊಪ್ಪು ಒಂದು ಹಿಡಿಯಷ್ಟು ಬಾಚಿಕೊಂಡು ನಾಗಮ್ಮನ ಮಡಿಲಿಗೆ ಹಾಕಿದಳು. ಅಂದರೆ ನಾಗಮ್ಮ ಪಟ್ಟ ಶ್ರಮಕ್ಕೆ ಇದು ಕಾಣಿಕೆ ಎನ್ನುವ ಹಾಗೆ ಇತ್ತು ಈ ಗಿಡದ ಎಲೆಗಳು. ಬಂದವರು ಪುನಃ ಅವರ ಊರಿನ ದಿಕ್ಕಿನ ಕಡೆ ನಡೆದರು. ನಾಗಮ್ಮ ಕೋಪಗೊಂಡು ಅವರು ಮಡಿಲಿಗೆ ಹಾಕಿದ ಅವರೆ ಎಲೆಗಳನ್ನ ದಾರಿಯಲ್ಲೆ ಎಸೆದು ಮನೆ ಕಡೆ ನಡೆದಳು. ಮಾರನೇ ದಿನ ಸೀರೆ ಬದಲಾಯಿಸುವಾಗ ಸೆರಗಿನಿಂದ ಎರಡು ದುಂಡನೆಯ ಚಿನ್ನದ ನಾಣ್ಯಗಳು ಕೆಳಗೆ ಬಿದ್ದವು. ನಾಗಮ್ಮನಿಗೆ ಚೆಲ್ಲಿದ ಎಲೆಗಳ ಬಗ್ಗೆ ಅನುಮಾನ ಬಂದು ತಾನು ಸೆರಿಗಿನಿಂದ ಸೊಪ್ಪನ್ನು ಹೊರ ಚೆಲ್ಲಿದ ಸ್ಥಳಕ್ಕೆ ಬಂದು ನೋಡಲಾಗಿ ಆ ಎಲೆಗಳು ಕಪ್ಪಾಗಿ ಕರಕಲು ಬೂದಿಯಾಗಿದ್ದವು. ಆಗ ತಿಳಿದುಬಂದ ವಿಷಯ ಏನೆಂದರೆ, ಹೆರಿಗೆಯಾದವಳೂ ನಾಗಮ್ಮನ ಕರೆದುಕೊಂಡು ಹೋಗಲು ಬಂದವರು ಎಲ್ಲಾ ಚೌಡಿಗಳು. ಆ ಪ್ರದೇಶದಲ್ಲಿ ಚೌಡಿಗಳ ಕಾಟ ಇರುವುದಾಗಿ ಅವಳಿಗೆ ತಿಳಿದು ಬಂದಿತು. ಚೌಡಿಯ ಹೆರಿಗೆ ಮಾಡಿದ ನಾಗಮ್ಮನ ಊರಿನಲ್ಲಿ ಬಹಳ ಮಾನ್ಯತೆ ಸಿಕ್ಕಿತು.

● **ಹ.ಸಾ. ಹಸನ್, ಕಾರಗಲ್**